ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/2015**

**ಪ್ರಾಸಾ- 17 ಚಾಸಾ- 56**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಜೆ ಮೋಹನ್ ಕುಮಾರ್ |
| ತಂದೆಯ ಹೆಸರುಃ | : | ಜವರೇಗೌಡ |
| ವಯಸ್ಸುಃ | : | 45 ವರ್ಷ |
| ಉದ್ಯೋಗಃ | : | ಇಂಜಿನಿಯರ್ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 06-11-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಅರಕಲಗೂಡಿನಲ್ಲಿ ಯುವ ಡಾಟ್ ಕಾಂ ಎಂಬ ಸಂಸ್ಥೆಯನ್ನು 2003 ರಿಂದ 2010ರವರೆಗೆ ನಡೆಸುತ್ತಿದ್ದೆನು. ಸರ್ಕಾರವು ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಕಂಪ್ಯೂಟರ್ ತರಬೇತಿ ಮಾಡಿಕೊಡಲು ನಮ್ಮ ಸಂಸ್ಥೆಯನ್ನು ಆಯ್ಕೆ ಮಾಡಿದ್ದರು. ಅದರಂತೆ ನಾನು ಹಾಸನದ ಆರ್ ಸಿ ರಸ್ತೆಯಲ್ಲಿರುವ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ತರಬೇತಿಯನ್ನು ನೀಡಿದ್ದೆನು. ಆ ಸಮಯದಲ್ಲಿ ಹೆಚ್ ಜೆ ಶುಭಾ ಎಂಬುವವರು ನನ್ನ ಸಂಸ್ಥೆಯಲ್ಲಿ ಮಾಹಿತಿ ಸಿಂಧು ಯೋಜನೆಯಡಿ ಕಂಪ್ಯೂಟರ್ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಮಾಹಿತಿಯನ್ನು ನೀಡುವಂತೆ ದಿನಾಂಕ 14-8-14ರಂದು ಹಾಸನ ಲೋಕಾಯುಕ್ತ ಪೊಲೀಸರಿಂದ ಮನವಿ ಬಂದಿತ್ತು. ಆ ಮನವಿಯನ್ನು ಈಗ ನೋಡುತ್ತಿದ್ದು ನಿಪಿ-91 ಎಂದು ಗುರುತಿಸಲಾಯಿತು. ಅದರಂತೆ ಆ ಮಾಹಿತಿಯನ್ನು ನಾನು ದಿನಾಂಕ 24-9-14ರಂದು ಈಗ ನೋಡುತ್ತಿರುವ ದಾಖಲೆಯಂತೆ ನೀಡಿರುತ್ತೇನೆ. ಆ ದಾಖಲೆಯನ್ನು ನಿಪಿ-92 ಎಂದು ಸಾಕ್ಷಿಯ ರುಜುವನ್ನು ನಿಪಿ-92(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ನನಗೆ ಸರ್ಕಾರದಿಂದ ಹಣ ಬರುತ್ತಿತ್ತು, ಅದರಿಂದ ಶುಭಾರವರಿಗೆ ನಾನು ವೇತನ ಪಾವತಿಸುತ್ತಿದ್ದೆನು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**